<u>ದಿನಾಂಕ **22.08.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಅರೋಪಿ ಪರ ವಕೀಲರಿಂದ</u>

ಮುಂಗಡವಾಗಿ ನಾನು ಕೊಟ್ಟ ಒಂದು ಕೋಟಿ 15 ಲಕ್ಷ ನಗದಾಗಿ ನೀಡಿರುತ್ತೇನೆ. ಆ ಹಣವನ್ನು ಒಂದೇ ದಿನ ಕೊಟ್ಟಿರುತ್ತೇನೆ. ಆ ಹಣ ನನಗೆ ವಾಪಾಸ್ಸು ನಗದಾಗಿ ಕೊಟ್ಟಿರುತ್ತಾರೆ . 15.02.2015 ರಂದು ಮುಂಗಡವಾಗಿ 45 ಲಕ್ಷ ಹಣವನ್ನು ಪಿರ್ಯಾದುದಾರರಿಗೆ ಕೊಟ್ಟು ಕ್ರಯಪತ್ರ ಮಾಡಿಕೊಟ್ಟಿರುತ್ತೇನೆ. ಆ ಕರಾರು ಪತ್ರ ರದ್ದಾಗಿರುತ್ತದೆ. ಆ ಕ್ರಯಪತ್ರ ರದ್ದಾಗಿರುವ ಬಗ್ಗೆ ದಾಖಲಾತಿಗಳು ಹಾಜರುಪಡಿಸಲು ತೊಂದರೆ ಇಲ್ಲ. 45 ಲಕ್ಷ ಹಣವನ್ನು ನಾನು ನಗದಾಗಿ ಕೊಟ್ಟಿರುತ್ತೇನೆ. 45 ಲಕ್ಷ ಹಣದ ಮೂಲ ಆ ಹಣ ನನ್ನಲ್ಲಿಯೇ ಮನೆಯಲ್ಲಿಯೇ ಇತ್ತು. ಮೂರನೇ ಕರಾರುಪತ್ರದ ಪ್ರಕಾರ ನೀಡಿದ 50 ಲಕ್ಷ ಹಣ ಮನೆಯಲ್ಲಿ ಇತ್ತಾ ಎಂದರೆ ಹಳೆಯ ಕರಾರು ರದ್ದಾಗ ವಾಪಾಸ್ಸು ಕೊಟ್ಟ ಹಣವನ್ನೇ ನಾನು ಪುನಹ ಕೊಟ್ಟಿರುತ್ತೇನೆ. ಸುಮಾರು 6 ತಿಂಗಳ ಅಂತರದಲ್ಲಿ ಮೊದಲ ಕರಾರುಪತ್ರ ರದ್ದಾಗಿ ಮೂರನೇ ಕರರುಪತ್ರ ಆಗಿರುತ್ತದೆ. ಅದುವರೆಗೂ ಮೊದಲನೇ ಕರಾರುಪತ್ರ ರದ್ದಾಗಿ ವಾಪಾಸ್ಸು ಬಂದ ಹಣ ನನ್ನ ಮನೆಯಲ್ಲಿ ಇತ್ತು. ಉಳಿದ ಹಣ ಸಾಲ ಮಾಡಿ ಕೊಟ್ಟಿರುತ್ತೇನೆ. ಉಳಿದ 15 ಲಕ್ಷ ಹಣ ಎಲ್ಲಿಂದ ಬಂತು ಎಂದರೆ ನನ್ನ ಸ್ನೇಹಿತರಿಂದ ತೆಗೆದುಕೊಂಡಿರುತ್ತೇನೆ. ಯಾವ ಸ್ನೇಹಿತರು ಎಂದು ಹೇಳಲಾಗುವುದಿಲ್ಲ. ಅವರ ಹೆಸರನ್ನು ಹೇಳಿದರೆ ತೊಂದರೆ ಇಲ್ಲ ಎಂದರೆ ಸರಿ. 2 ಲಕ್ಷಕ್ಕಿಂತ ಹಣ ಹೆಚ್ಚಿನ ಹಣದ ವ್ಯವಹಾರವನ್ನು ನಗದಾಗಿ ಮಾಡಬಾರದು ಎಂದು ನಿಬಂದನೆ ಇರುತ್ತದೆ ಎಂದರೆ ಮೊದಲು ಇರಲಿಲ್ಲ ಈಗ ಇರುತ್ತದೆ. ಮೊದಲು ನಿಬಂದನೆ ಇತ್ತು ಎಲ್ಲಿವರೆಗೂ ಎಂದು ಗೊತ್ತಿಲ್ಲ. ನಾನು ಸಾಕಷ್ಟು ವ್ಯವಹಾರಗಳನ್ನು ಹೆಚ್ ಡಿ ಎಫ್ ಸಿ ಮತ್ತು ಎಸ್ ಬಿ ಐ ಎಂದರೆ ಸರಿ. ಬಿಲ್ ಮೂಲಕ ಬಂದ ವ್ಯವಹಾರವನ್ನು ಮಾತ್ರ ಚೆಕ್ ಮೂಲಕ ಮಾಡುತ್ತೇವೆ . ಉಳಿದ ನೊಂದಾಯಿತವಲ್ಲದ ವ್ಯವಹಾರವನ್ನು ನಗದಾಗಿ ಮಾಡುತ್ತೇವೆ. ಜಮೀನು ವ್ಯವಹಾರಗಳನ್ನು ಮಾಡುವಾಗ ನೀವು ಮಾಡಿರುತ್ತೀರಾ ಎಂದರೆ ಒಂದು ಮಾತ್ರ ಮಾಡಿರುತ್ತೇನೆ. ಸರ್ಕಾರಕ್ಕೆ ತೆರಿಗೆ ತಡೆಯುವ ಉದ್ದೇಶದಿಂದ ಮಾಡುತ್ತೀರಾ ಎಂದರೆ ಸರಿಯಲ್ಲ ಸರ್ಕಾರಕ್ಕೆ ಹಣವನ್ನು ಪ್ರತಿವರ್ಷ ಕಟ್ಟುತ್ತೇನೆ. ಚೆಕ್ಕು ಮೂಲಕ ನೀಡುವ ಹಣವನ್ನು ನಾನೇ ಬರೆದು ನೀಡುತ್ತೇನೆ. 10 ವರ್ಷಗಳ ಅವಧಿಯಲ್ಲಿ ನಾನು ಚೆಕ್ಕು ಮೂಲಕ ನೀಡಿದ ವ್ಯವಹಾರಗಳ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಅವುಗಳನ್ನು ಕೊಡಲು ಕಾನೂನುಪ್ರಕಾರ ಅವಕಾಶ ಇರುವುದಿಲ್ಲ.

ಸಿಸಿ 286/2018 ರ ಪ್ರಕರಣವನ್ನು ನಾವು ನೀಡಿದ ಮಾಹಿತಿ ಆದಾರದಲ್ಲಿ ನಮ್ಮ ವಕೀಲರು ನಡೆಸಿರುತ್ತಾರೆ ಎಂದರೆ ಸರಿ ವಕೀಲರ ಕಾನೂನು ಸಲಹೆ ಪಡೆದಿರುತ್ತೇನೆ. ಸಿಸಿ 86/2018 ರಲ್ಲಿ ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ಎದುರುದಾರರು ನನ್ನ ಪಾಟೀ ಸವಾಲು ಮಾಡಿರುವುದಿಲ್ಲ . ಆ ಪ್ರಕರಣದಲ್ಲಿ ನನ್ನ ವಿಚಾರಣೆಯನ್ನು ಮಾಡದ

ಕಾರಣ ಪಾಟೀ ಸವಾಲು ಮಾಡಿರುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಈ ಪ್ರಕರಣದಲ್ಲಿ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ನನ್ನ ಇನ್ನೊಂದು ಪ್ರಕರಣದಲ್ಲಿ ನಾನು ಹೇಳಲು ತೊಂದರೆ ಇತ್ತಾ ಎಂದರೆ ನನ್ನನ್ನು ಕೇಳಿರುವುದಿಲ್ಲ ನಾನು ಹೇಳಿರುವುದಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.